**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ ರವರು ನಿಯಮ 72 ರ ಅಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ.**

ರಾಜ್ಯದ ಅಡಿಕೆ ಬೆಳೆಯುವ ಬಹುತೇಕ ಪ್ರದೇಶಗಳಲ್ಲಿ ಎಲೆಚುಕ್ಕಿ ರೋಗ ಕಾಣಿಸಿಕೊಂಡಿದ್ದು, ಬೆಳೆಗಾರರನ್ನು ಕಂಗಾಲು ಮಾಡಿದೆ. ಎಲೆಚುಕ್ಕಿ ರೋಗ ಕಾಣಿಸಿಕೊಂಡ ಎರಡನೇ ವರ್ಷದಲ್ಲಿ ಇಳುವರಿ ಅರ್ಧದಷ್ಟು ಕಡಿಮೆಯಾಗಿ, ಅಡಿಕೆ ತೋಟ ಬಾಡಿಹೋಗಿ, ಇಳುವರಿ ಕೈತಪ್ಪಿ ಹೋಗುತ್ತಿದೆ. ಅಡಿಕೆ ತೋಟಗಳಿಗೆ ಕಾಡುತ್ತಿರುವ ಎಲೆಚುಕ್ಕಿ ರೋಗ ನಿವಾರಿಸಿ ಬೆಳೆ ಉಳಿಕೊಳ್ಳಲು ತಕ್ಷಣವೇ ಉಚಿತ ಔಷಧವನ್ನು ವಿತರಿಸಿ, ರೋಗ ಉಲ್ಬಣಿಸದಂತೆ ಹಾಗೂ ಹೊಸ ರೂಪಾಂತರ ಪಡೆಯುತ್ತಿರುವ ಶಿಲೀಂಧ್ರಗಳ ಅಧ್ಯಯನಕ್ಕಾಗಿ ತಜ್ಞರನ್ನು ಕಳುಹಿಸಿ ವರದಿ ಪಡೆದು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳದೇ ಇರುವುದರಿಂದ ಅಡಿಕೆ ಬೆಳೆಗಾರರು ಸಂಕಷ್ಟಕ್ಕೀಡಾಗಿರುವ ಗಂಭೀರ ಸಮಸ್ಯೆ ಕುರಿತು.

**ಉತ್ತರ**: ಕರ್ನಾಟಕ ರಾಜ್ಯದಲ್ಲಿ 6.14 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಯನ್ನು ಬೆಳೆಯಲಾಗುತ್ತಿದ್ದು, 9.33 ಲಕ್ಷ ಮೆ.ಟನ್ ಉತ್ಪಾದನೆ ಮಾಡಲಾಗುತ್ತಿದೆ. ರಾಜ್ಯದ ಅಡಿಕೆ ಬೆಳೆಯುವ ಪ್ರದೇಶದಲ್ಲಿ ಎಲೆಚುಕ್ಕೆ ರೋಗವು ಅಂದಾಜು 53977 ಹೆಕ್ಟೇರ್ ಪ್ರದೇಶದಲ್ಲಿ ಕಂಡುಬಂದಿರುತ್ತದೆ. ಚಿಕ್ಕಮಗಳೂರು-28788 ಹೆಕ್ಟೇರ್, ಶಿವಮೊಗ್ಗ-11950 ಹೆಕ್ಟೇರ್, ಉತ್ತರ ಕನ್ನಡ-8604 ಹೆಕ್ಟೇರ್, ದಕ್ಷಿಣ ಕನ್ನಡ-3623 ಹೆಕ್ಟೇರ್, ಹಾಸನ-360 ಹೆಕ್ಟೇರ್, ಕೊಡಗು-529 ಹೆಕ್ಟೇರ್ ಹಾಗೂ ಉಡುಪಿ-123 ಹೆಕ್ಟೇರ್ ಜಿಲ್ಲೆಗಳಲ್ಲಿ ಅಡಿಕೆ ತೋಟಗಳು ಬಾಧಿತವಾಗಿರುತ್ತವೆ.

**ವಿಜ್ಞಾನಿಗಳ ತಂಡ ಭೇಟಿ ನೀಡಿರುವ ಬಗ್ಗೆ**: ಅಡಿಕೆ ಎಲೆ ಚುಕ್ಕೆ ರೋಗ ಬಾಧಿತ ಪ್ರದೇಶಗಳಿಗೆ ಕೇಂದ್ರ ಸರ್ಕಾರದ ಸಂಸ್ಥೆಗಳ ತಜ್ಞರ ಸಮಿತಿಯನ್ನು ರಚಿಸಲಾಗಿದ್ದು, ಈ ತಂಡವು ಚಿಕ್ಕಮಗಳೂರು, ದಕ್ಷಿಣ ಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಯ ರೋಗ ಬಾಧಿತ ತೋಟಗಳಿಗೆ ಭೇಟಿ ನೀಡಿರುತ್ತದೆ. ಈ ತಂಡವು ನಿರ್ದೇಶಕರು, CPCRI (Central Plantation Crop Research Institute) ಕಾಸರಗೋಡು, ನಿರ್ದೇಶಕರು, DASD (Directorate of Arecanut and Spice Development), Calicut, ಹಾಗೂ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗ, IARI (Indian Agricultural Research Institute), ನವದೆಹಲಿ, BCKV (Bidhan Chandra Krishi Vishwavidhyalaya), ಪಶ್ಚಿಮ ಬಂಗಾಳದ ತಜ್ಞರು ಮತ್ತು ಇಲಾಖಾ ಅಧಿಕಾರಿಗಳನ್ನು ಒಳಗೊಂಡಿದ್ದು ನೀಡಿರುವ ವರದಿಯಲ್ಲಿ ಕೆಳಕಾಣಿಸಿದ ಅಂಶಗಳನ್ನು ಶಿಫಾರಸ್ಸು ಮಾಡಿರುತ್ತಾರೆ.

1. ತೋಟದ ನೈರ್ಮಲೀಕರಣ: ತೀವ್ರ ರೋಗ ಬಾಧಿತ ಗರಿಗಳನ್ನು ಕತ್ತರಿಸಿ ಸುಡುವುದು.
2. ಶಿಲೀಂದ್ರನಾಶಕಗಳು: ಮೊದಲನೇ ಸಿಂಪರಣೆಯನ್ನು ಅಗಸ್ಟ್–ಸೆಪ್ಟೆಂಬರ್ ಮಾಹೆಯಲ್ಲಿ ಪ್ರೋಪಿಕೊನೊಜೋಲ್ 25% ಇಸಿ (1 ಮಿ.ಲೀ. ಪ್ರತಿ ಲೀಟರ್ ನೀರಿಗೆ) ಅಥವಾ ಟೆಬುಕೊನೊಜೋಲ್ (1 ಮಿ.ಲೀ. ಪ್ರತಿ ಲೀಟರ್ ನೀರಿಗೆ) ಅಥವಾ ಹೆಕ್ಸೊಕೊನೊಜೋಲ್ (1 ಮಿ.ಲೀ. ಪ್ರತಿ ಲೀಟರ್ ನೀರಿಗೆ) ಸಿಂಪಡಿಸುವುದು, ನಂತರ 25 ರಿಂದ 30 ದಿನಗಳ ಅಂತರದಲ್ಲಿ ರೋಗದ ತೀವ್ರತೆ ಆದಾರದ ಮೇಲೆ ಪ್ರೋಪಿನೆಬ್ 70% ಡಬ್ಲೂಪಿ (2ಗ್ರಾಂ. ಪ್ರತಿ ಲೀಟರ್ ನೀರಿಗೆ) ಸಿಂಪಡಿಸುವುದು.
3. ಸಮೂದಾಯ (Community approach): ರೋಗವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಲು ಸಮೂಹಿಕವಾಗಿ ಸಿಂಪರಣೆ ವಿಧಾನವನ್ನು ಅನುಸರಿಸುವುದು ಹಾಗೂ ರೋಗ ಬಾಧಿತ ಪ್ರದೇಶದಿಂದ ಗಿಡಗಳ ನಾಟಿ ಮಾಡುವುದನ್ನು ನಿಯಂತ್ರಿಸುವುದು.

4. ಪೊಷಕಾಂಶಗಳ ನಿರ್ವಹಣೆ: ಗಿಡಗಳ ಉತ್ತಮ ಬೆಳವಣಿಗೆಗಾಗಿ ಮಣ್ಣಿನ ಪರಿಕ್ಷೆಯ ಆಧಾರದ ಮೇರೆಗೆ ಸಮತೋಲನ ಪೊಷಕಾಂಶಗಳನ್ನು ಪೂರೈಸುವುದು.

**<u>ಉಚಿತವಾಗಿ ಔಷಧಿ ನೀಡುವ ಬಗ್ಗೆ</u>:**

ತೋಟಗಾರಿಕೆ ಇಲಾಖೆಯ ವತಿಯಿಂದ ಅಡಿಕೆ ಬೆಳೆಗಾರರಿಗೆ ಎಲೆಚುಕ್ಕೆ ರೋಗದ ನಿಯಂತ್ರಣೆಗಾಗಿ ಪ್ರತಿ ಫಲಾನುಭವಿಗೆ ಪ್ರತಿ ಹೆಕ್ಟೇರ್‌ಗೆ ರೂ.4000.00 ಗಳಂತೆ 1.5 ಹೆಕ್ಟೇರ್ ವರೆಗೆ ರೂ.6000/- ಮೊತ್ತದ ಸಸ್ಯ ಸಂರಕ್ಷಣಾ ಔಷಧಿಗಳನ್ನು ನೀಡಲಾಗುತ್ತಿದೆ. ಈ ಕಾರ್ಯಕ್ರಮದಡಿ 2022-23 ನೇ ಸಾಲಿನಲ್ಲಿ 5000 ಹೆಕ್ಟೇರ್ ಪ್ರದೇಶಕ್ಕೆ ರೂ. 200.00ಲಕ್ಷಗಳು ಹಾಗೂ 2023-24ನೇ ಸಾಲಿನಲ್ಲಿ 6250 ಹೆಕ್ಟೇರ್ ಪ್ರದೇಶಕ್ಕೆ ರೂ. 250.00 ಲಕ್ಷಗಳ ವೆಚ್ಚದಲ್ಲಿ ಸಸ್ಯ ಸಂರಕ್ಷಣಾ ಔಷಧಿಗಳನ್ನು ಉಚಿತವಾಗಿ ನೀಡಲಾಗಿರುತ್ತದೆ.

**<u>ತೋಟಗಾರಿಕೆ ಇಲಾಖೆಯಿಂದ ಕೈಗೊಳ್ಳುತ್ತಿರುವ ಇತರೆ ಕ್ರಮಗಳು:</u>**

1. ಅಡಿಕೆ ಎಲೆಚುಕ್ಕೆ ರೋಗದ ನಿಯಂತ್ರಣೆ ಕುರಿತು ಸಂಶೋಧನೆ ಕೈಗೊಳ್ಳಲು ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗಕ್ಕೆ ಪ್ರಸಕ್ತ ಸಾಲಿನಲ್ಲಿ ರೂ.43.61 ಲಕ್ಷಗಳ ಅನುದಾನವನ್ನು ನೀಡಲಾಗಿದೆ.
2. ಅಡಿಕೆ ಬೆಳೆಗಾರರಿಗೆ ಅಡಿಕೆ ಬೆಳೆಯ ಕಟಾವು ಹಾಗೂ ಸಿಂಪರಣೆಗಾಗಿ(ದೋಟಿ) ಖರೀದಿಸಲು ಕೃಷಿ ಯಾಂತ್ರೀಕರಣ ಯೋಜನೆಯಡಿ ಸಾಮಾನ್ಯ ವರ್ಗದವರಿಗೆ ಶೇ.40 ರಷ್ಟು ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರಿಗೆ ಶೇ.50 ರಂತೆ ಸಹಾಯಧನ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ 1201 ಫಲಾನುಭವಿಗಳಿಗೆ ಈವರೆಗೂ ರೂ.366.68 ಲಕ್ಷಗಳ ಸಹಾಯಧನ ನೀಡಲಾಗಿದೆ.
3. ಪ್ರಮುಖ ಅಡಿಕೆ ಬೆಳೆಯುವ ಜಿಲ್ಲೆಗಳಲ್ಲಿ ಒಟ್ಟು 53977 ಹೆಕ್ಟೇರ್ ಪ್ರದೇಶದಲ್ಲಿ ಎಲೆ ಚುಕ್ಕೆ ರೋಗದ ನಿಯಂತ್ರಣೆಗೆ ರೂ.21.50 ಕೋಟಿಗಳ ಅನುದಾನದ ಅವಶ್ಯಕತೆಯಿದ್ದು, ಈ ಸಂಬಂದಿತ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ.
4. ಅಡಿಕೆ ಎಲೆಚುಕ್ಕೆ ರೋಗದ ನಿಯಂತ್ರಣೆಗೆ ಅಗತ್ಯವಿರುವ ಸಸ್ಯ ಸಂರಕ್ಷಣಾ ಔಷಧಿಗಳು ಹಾಗೂ ಸಿಂಪರಣೆ ವೆಚ್ಚ, ತೋಟಗಳ ನೈರ್ಮಲೀಕರಣ ಹಾಗೂ ಪೋಷಕಾಂಶಗಳ ನಿರ್ವಹಣೆ ಕುರಿತಾದ ಅರಿವು ಮೂಡಿಸುವ ಕಾರ್ಯಕ್ರಮಗಳು, ಉತ್ತಮ ತೋಟಗಾರಿಕೆ ಬೇಸಾಯ ಪದ್ಧತಿಗಳ ಅಳವಡಿಕೆ, ಪ್ರಾತ್ಯಕ್ಷತೆಗಳು ಇತ್ಯಾದಿ ಬಾಬ್ತುಗಳಿಗಾಗಿ ರೂ. 225.73 ಕೋಟಿಗಳ ಪ್ರಸ್ತಾವನೆಯನ್ನು ರೂಪಿಸಿ ಕೇಂದ್ರ ಸಂಸ್ಥೆಯಾದ CPCRI ಕಾಸರಗೋಡು ರವರ ಮೂಲಕ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ. ಈ ಪ್ರಸ್ತಾವನೆಯ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಾಲುದಾರಿಕೆ ಮತ್ತು ವರ್ಷವಾರು ಅನುದಾನದ ಹಂಚಿಕೆ ಕುರಿತು ಕೇಂದ್ರ ಸರ್ಕಾರವು ಮಾಹಿತಿಯನ್ನು ಕೋರಿದ್ದು, ಪರಿಷ್ಕೃತ ಪ್ರಸ್ತಾವನೆಯನ್ನು ಸಿದ್ದಪಡಿಸಲಾಗುತ್ತಿದೆ.
5. ಅಡಿಕೆ ಎಲೆ ಚುಕ್ಕೆ ರೋಗ ನಿಯಂತ್ರಣ ಕುರಿತು ವಿಶ್ವವಿದ್ಯಾನಿಲಯದ ತಜ್ಞರ ಸಹಯೋಗದೊಂದಿಗೆ ತರಬೇತಿ, ಕಾರ್ಯಗಾರಗಳು ಹಾಗೂ ಪ್ರಾತ್ಯಕ್ಷತೆಗಳನ್ನು ಏರ್ಪಡಿಸುವುದರ ಮೂಲಕ ರೈತರಿಗೆ ಅರಿವು ಮೂಡಿಸಲಾಗುತ್ತಿದೆ.

HORTI 479 HGM 2023

(ಎಸ್.ಎಸ್.ಮಲ್ಲಿಕಾರ್ಜುನ್)
ಗಣಿ ಮತ್ತು ಭೂ ವಿಜ್ಞಾನ, ತೋಟಗಾರಿಕೆ ಸಚಿವರು